(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಾಬುರಾವ್ ಬಸವಣ್ಣಪ್ಪ ಚಿಂಚನಸೂರ್ (ಸಣ್ಣ ಉಳಿತಾಯ ಹಾಗೂ ಮುಜರಾಯಿ ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, 1997ನೇ ಸಾಲಿನ ಕರ್ನಾಟಕ ವಿಧಾನಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಹಿಂದು ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, 1997ರ ಕರ್ನಾಟಕ ವಿಧಾನಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

12. ಖಾಸಗಿ ಕಾರ್ಯಕಲಾಪ

(1) ಕರ್ನಾಟಕ ನ್ಯಾಯವಾದಿಗಳ ಕಲ್ಯಾಣನಿಧಿ (ತಿದ್ದುಪಡಿ) ವಿಧೇಯಕ, 2000.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ಸಚ್ಚಿದಾನಂದರ ಬಿಲ್ನ್ನು ನೋಡಿದ್ದೇನೆ. ಆ ಮಸೂದೆಯು ಈಗಾಗಲೇ ಮೇಲ್ಮನೆಯಲ್ಲಿ ಇಂಪ್ರೆಷ್ಡ್ ಆಗಿ ಚರ್ಚೆಯಾಗುತ್ತಿದೆ. ಆ ಮಸೂದೆಯಲ್ಲಿ 2-3 ಸಣ್ಣ ಸಣ್ಣ ದೋಷಗಳು ಇವೆ. ಮೊದಲನೆಯದಾಗಿ ತಾವು ಫೈನಾನ್ಷಿಯಲ್ ಸ್ಟೇಟ್‌ಮೆಂಟ್‌ನ್ನು ಹಾಕಲಿಲ್ಲ, ಅದನ್ನು ಖಾಸಗಿ ಮಸೂದೆಯಲ್ಲಿ ಹಾಕುವುದಕ್ಕಾಗುವುದಿಲ್ಲ. ಎರಡನೆಯದಾಗಿ ಬಾರ್ ಕೌನ್ಸಿಲ್‌ನ ರೆಕಮೆಂಡೇಷನ್ಸ್ ಬಂದಿಲ್ಲ. ಆ ಮಸೂದೆಯೊಳಗೆ ಬಾರ್ ಕೌನ್ಸಿಲ್‌ನ ರೆಕಮೆಂಡೇಷನ್ಸ್‌ನ ಅನ್ವಯ ಅಲ್ಲಿ ಏನು ಮಾಡಬಹುದು ಎಂದರೆ, ಅಲ್ಲಿ 1 ಲಕ್ಷ ರೂಗಳು ಎಂದು ಇದೆ, ನೀವು 2 ಲಕ್ಷ ರೂಗಳನ್ನು ಕೇಳಿದ್ದೀರಿ ಇಷ್ಟೇ ವ್ಯತ್ಯಾಸಗಳಾಗುತ್ತವೆ; ಈ ಪಾಯಿಂಟ್ ಸರಿಯಾಗಿದೆ. ಆ ವಿವರಕ್ಕೆ ನಾನು ಹೋಗುವುದಿಲ್ಲ, ಅದನ್ನು ಅಕ್ಷೇ ಅಮೆಂಡ್ ಮಾಡಿದರೆ ನಿಮ್ಮ ಬಯಕೆಗಳು ಏನಿದೆ ಅದು ತಂದೀಯಬಹುದು. ಆದ್ದರಿಂದ ನಾವು ಇದನ್ನು

ಪ್ರೆಸ್ ಮಾಡಿದರೆ ಆ ಬಿಲ್ಲಿಗೆ ತೊಂದರೆಯಾಗಬಹುದು, ಅದು ಅಫಿಷಿಯಲ್ ಬಿಲ್, ಅದು ಸರ್ಕಾರ ಮಟ್ಟದಿಂದ ಬಂದಿರತಕ್ಕಂತಹ ಮಸೂದೆ, ಇದನ್ನು ನಾನು ತಮ್ಮ ವಿವೇಚನೆಗೆ ಬಿಡುತ್ತೇನೆ.

ಶ್ರೀ ಕೆ.ಎಸ್. ಸುಬ್ಬಾರೆಡ್ಡಿ :— ಇದು ಒಂದು ನಿಜವಾದ ವಿಧೇಯಕವಾಗಿದ್ದರೆ ನಮ್ಮದೇನು ಅಭ್ಯಂತರವಿಲ್ಲ. ಹಣಕಾಸಿನ ಮೊತ್ತದಲ್ಲಿ ಸ್ವಲ್ಪ ವ್ಯತ್ಯಾಸಗಳಿದೆ, 1ಲಕ್ಷದಿಂದ 2 ಲಕ್ಷ ರೂಪಾಯಿಗಳವರೆಗೆ ಮಾಡಿ ಎಂದು ಹೇಳಿದ್ದೇನೆ, 1 ಲಕ್ಷ ರೂಗಳು ಹೆಚ್ಚಿಗೆ ಆಗುತ್ತದೆ ಅದನ್ನು ನೀವು ಅಮೆಂಡ್‌ಮೆಂಟ್ ಮಾಡಿ ಮಾಡಬಹುದು. ಆದರೆ ಐ ಥಿಂಕ್ ಅದು ಆಗಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಸುಬ್ಬಾರೆಡ್ಡಿಯವರು ಫೀ ಕೊಟ್ಟರೆ ಸರಿಯಾಗಿ ಹೇಳುವುದಿಲ್ಲ, ಹಾಗೆಯೆ ಸಲಹೆಯನ್ನು ಕೊಡುತ್ತಾರಲ್ಲವೇ?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ :— ಆದ್ದರಿಂದ ಈ ಬಿಲ್ಲನ್ನು ವಾಪಸ್ಸು ತೆಗೆದುಕೊಳ್ಳಬಹುದಲ್ಲವೇ?

ಶ್ರೀ ಡಿ.ಬಿ. ಚಂದ್ರೇಗೌಡ :— ಆಯಿತು.

ಶ್ರೀ ಕೆ.ಎಸ್. ಸುಬ್ಬಾರೆಡ್ಡಿ :— ಈ ಬಿಲ್ಲನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು :— ಒಪ್ಪಿಗೆ ನೀಡಲಾಯಿತು.

(ii) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ಕೆಲವು ಜಮೀನು ಪರಭಾರೆ ನಿಷೇಧ) ಕಾಯ್ದೆ (ಮೊದಲನೆಯ ತಿದ್ದುಪಡಿ) ವಿಧೇಯಕ, *2000.*

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ಕೆಲವು ಜಮೀನು ಪರಭಾರೆ ನಿಷೇಧ) ಕಾಯ್ದೆ (ಮೊದಲನೆಯ ತಿದ್ದುಪಡಿ) ವಿಧೇಯಕ, 2000 ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ...

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ವಿರೋಧಪಕ್ಷದ ನಾಯಕರು ಬಿಲ್‌ನ್ನು ಮೂವ್ ಮಾಡಿದ್ದಾರೆ.